ಶ್ರೀಮನ್ಮಧ್ವಾಚಾರ್ಯರ ಮೂಲಗ್ರಂಥಗಳ ಮಾಲಿಕೆಯಲ್ಲಿ

ಸಂಕೀರ್ಣ ಗ್ರಂಥಗಳು

(ಅಣುಭಾಷ್ಯ, ದ್ವಾದಶಸ್ತೋತ್ರ, ಜಯಂತೀನಿರ್ಣಯ, ಶ್ರೀಕಂದುಕಸ್ತುತಿ,
ಶ್ರೀಕೃಷ್ಣಾಮೃತಮಹಾರ್ಣವ, ನಖಸ್ತುತಿ, ತಂತ್ರಸಾರ, ಯಮಕಭಾರತ, ಕರ್ಮನಿರ್ಣಯ, ಸದಾಚಾರಸ್ಮೃತಿ)



ಕನ್ನಡ ಟೀಕಾ ಭಾಷಾಂತರ

ವೇದಮೂರ್ತಿ ದ್ವೈತವೇದಾಂತವಾಚಸ್ಪತಿ

ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು

॥ ಶ್ರೀಮಧ್ವನಾಥೋ ವಿಜಯತೇ ॥

ಶ್ರೀಮನ್ಮಧ್ವಾಚಾರ್ಯರ

ಮೂಲಗ್ರಂಥಗಳ ಮಾಲಿಕೆಯಲ್ಲಿ

ಸಂಕೀರ್ಣ ಗ್ರಂಥಗಳು

(ಅಣುಭಾಷ್ಯ, ದ್ವಾದಶಸ್ತೋತ್ರ, ಜಯಂತೀನಿರ್ಣಯ, ಶ್ರೀಕಂದುಕಸ್ತುತಿ,
ಶ್ರೀಕೃಷ್ಣಾಮೃತಮಹಾರ್ಣವ, ನಖಸ್ತುತಿ, ತಂತ್ರಸಾರ, ಯಮಕಭಾರತ,
ಕರ್ಮನಿರ್ಣಯ, ಸದಾಚಾರಸ್ಮೃತಿ)

ದ್ವೈತವೇದಾಂತವಿದ್ವಾನ್, ದ್ವೈತವೇದಾಂತಶಿರೋಮಣಿ ವೇದಾಂತವಾಚಸ್ಪತಿ,
ಉಡುಪಿ ಸಂಸ್ಕೃತಮಹಾಪಾಠಶಾಲಾನಿವೃತ್ತ ವೇದಾಂತಪ್ರಾಚಾರ್ಯ

ದಿ॥ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳಿಂದ

ರಚಿತವಾದ ಕನ್ನಡ ಟೀಕಾ ಭಾಷಾಂತರ ಸಹಿತ

ಪ್ರಕಾಶಕರು

ಶ್ರೀಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ
ಶ್ರೀಶ್ರೀಪಾದರಾಜಮಠ, ಮುಳಬಾಗಿಲು

॥ ಶ್ರೀಃ ॥

ನಖಸ್ತುತಿಯು

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ ॥ ಹರಿಃ ಓಂ ॥

ಮೂಲ ॥ ಪಾಂತ್ವಸ್ಮಾನ್ ಪುರುಹೂತವೈರಿಬಲವನ್ಮಾತಂಗಮಾದ್ಯದ್ಘಟಾ
ಕುಂಭೋಚ್ಚಾದ್ರಿವಿಪಾಟನಾಧಿಕಪಟುಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯಪ್ರತತಸುನಖರಾ ದಾರಿತಾರಾತಿದೂರ
ಪ್ರಧ್ವಸ್ತಧ್ವಾಂತಶಾಂತಪ್ರವಿತತಮನಸಾ ಭಾವಿತಾ ಭೂರಿಭಾಗ್ಯೈಃ
(ನಾಕಿವೃಂದ್ಯೈಃ) ॥ ೧ ॥

ಅರ್ಥ ॥ ಪುರುಹೂತವೈರಿಬಲವನ್ಮಾತಂಗಮಾದ್ಯದ್ಘಟಾಕುಂಭೋಚ್ಚಾದ್ರಿವಿಪಾಟನಾಧಿಕ ಪಟುಪ್ರತ್ಯೇಕವಜ್ರಾಯಿತಾಃ, ಪುರುಹೂತ=ಯಾಗಗಳಲ್ಲಿ ಬಹಳವಾಗಿ, ಹೋಮದಲ್ಲಿ ಉದ್ದೇಶಿಸಲ್ಪಡ ತಕ್ಕ ದೇವೇಂದ್ರನ, ವೈರಿ=ವೈರವುಳ್ಳ ದೈತ್ಯರೆಂಬ, ಬಲವತ್=ಸಾಮರ್ಥ್ಯವುಳ್ಳ, ಮಾತಂಗ=ಆನೆಗಳ, ಮಾದ್ಯತ್=ಮದವನ್ನು ಹೊಂದಿದ, ಘಟಾ=ಸಮುದಾಯದ, ಕುಂಭ=ಕುಂಭಸ್ಥಳಗಳೆಂಬ, ಉಚ್ಚ= ಉನ್ನತಗಳಾದ, ಅದ್ರಿ=ಪರ್ವತಗಳ, ವಿಪಾಟನ=ಶೀಳೋಣದರಲ್ಲಿ ಅಧಿಕ=ಅತ್ಯಂತವಾಗಿ, ಪಟು= ಸಮರ್ಥಗಳಾದ, ಪ್ರತ್ಯೇಕ=ಪ್ರತಿಯೊಂದು, ವಜ್ರಾಯಿತಾ=ವಜ್ರಾಯುಧದಂತೆ ಇರುವ, ಭೂರಿ ಭಾಗ್ಯೈಃ=ಭೂರಿ=ಬಹಳವಾದ, ಭಾಗ್ಯೈಃ=ಭಾಗ್ಯವುಳ್ಳ ಬ್ರಹ್ಮಾದಿ ದೇವತೆಗಳಿಂದ, ದಾರಿತಾರಾತಿದೂರ ಪ್ರಧ್ವಸ್ತಧ್ವಾಂತಶಾಂತಪ್ರವಿತಮನಸಾ, ದಾರಿತ=ತಿರಸ್ಕರಿಸಲ್ಪಟ್ಟ, ಅರಾತಿ=ಕಾಮಾದಿಷಡ್ವರ್ಗಗಳುಳ್ಳ, ದೂರ=ದೂರದಿಂದ, ಪ್ರಧ್ವಸ್ತ=ನಿರಾಕರಿಸಲ್ಪಟ್ಟ, ಧ್ವಾಂತ=ಅಜ್ಞಾನಾಂಧಕಾರವುಳ್ಳ, ಶಾಂತ=ರಾಗಾದಿ ದೋಷಗಳಿಂದ ಕಲುಷಿತವಾಗದಿರುವ, ಅಥವಾ ಭಗವಂತನಲ್ಲಿರುವ, ಪ್ರವಿತತ=ಚೆನ್ನಾಗಿ ವಿಸ್ತೃತವಾದ, (ತಂತಮ್ಮ ಯೋಗ್ಯತೆಯನ್ನನುಸರಿಸಿ ಭಗವಂತನ ಸ್ವರೂಪ ಗುಣಕರ್ಮಾದ್ಯನೇಕಾರ್ಥಗಳನ್ನು ವಿಷಯೀಕರಿಸುವ) ಮನಸಾ=ಮನಸ್ಸಿನಿಂದ, ಭಾವಿತಾಃ=ಧ್ಯಾನಿಸಲ್ಪಟ್ಟ, ಅಥವಾ ದಾರಿತಾರಾತಿ= ತಿರಸ್ಕರಿಸಲ್ಪಟ್ಟ ಕಾಮಾದಿಷಡ್ವರ್ಗಗಳು ಹೇಗಾದೀತೋ ಹಾಗೆ, ಭಾವಿತಾಃ=ಧ್ಯಾನಿಸಲ್ಪಟ್ಟ, ಶ್ರೀಮತ್ಕಂಠೀರವಾಸ್ಯಪ್ರತತಸುನಖರಾಃ, ಶ್ರೀಮತ್=ಮಹಾಲಕ್ಷ್ಮಿಯಿಂದ ನಿರಂತರದಲ್ಲಿಯೂ ಕೂಡಿರುವ, ಕಂಠೀರವಾಸ್ಯ=ಸಿಂಹದ ಮುಖವಿರುವ ನರಸಿಂಹದೇವರ, ಪ್ರತತ=ವ್ಯಾಪ್ತಗಳಾದ, ಅಥವಾ ಪ್ರಖ್ಯಾತಗಳಾದ, ಸು=ಶೋಭನಗಳಾದ, ನಖರಾಃ=ಉಗುರುಗಳು, ಅಸ್ಮಾನ್=ನಮ್ಮನ್ನು, ಪಾಂತು=ರಕ್ಷಿಸಲಿ.

ತಾತ್ಪರ್ಯ ॥ 1. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಜತಪೀಠದಲ್ಲಿ ಒಂದು ದಿನ ಶ್ರೀಕೃಷ್ಣನಿಗೆ ನೈವೇದ್ಯ ಸಮರ್ಪಣೆ ಮಾಡುತ್ತಿರಲು ಶಿಷ್ಯಶ್ರೇಷ್ಠರಾದ ತ್ರಿವಿಕ್ರಮ ಪಂಡಿತಾಚಾರ್ಯರು ಸಾವಕಾಶವಾಗಲು ಕಾರಣವೇನೆಂಬುದನ್ನು ತಿಳಿಯಬೇಕೆಂದಿಚ್ಛಿಸಿ ಕಿಟಕಿಯ ಛಿದ್ರದಲ್ಲಿ ನೋಡುವವರಾದರು. ಆಗ ಹನುಮದ್ಭೀಮ ಮಧ್ವರೂಪಗಳಿಂದ ಪ್ರತ್ಯಕ್ಷರಾದ ರಾಮ ಕೃಷ್ಣ

ವೇದವ್ಯಾಸ ದೇವರಿಗೆ ಪೂಜಿಸತಕ್ಕದ್ದನ್ನು ನೋಡಿ ಅತ್ಯಾಶ್ಚರ್ಯಯುಕ್ತರಾಗಿ 'ಶ್ರೀಮದ್ವಿಷ್ಣ್ವಂಘ್ರಿನಿಷ್ಠಾ' ಇದು ಮೊದಲಾದ (41) ನಲ್ವತ್ತೊಂದು ಶ್ಲೋಕಗಳಿಂದ ವಾಯುದೇವರನ್ನು ಸ್ತುತಿಸಿದರು. ಆಗ ಶ್ರೀಮದಾಚಾರ್ಯರು ತನ್ನ ಸ್ತುತಿಯನ್ನು ಮಾತ್ರ ಸಹಿಸಲಾರದೆ ಆ ವಾಯುಸ್ತುತಿಯಲ್ಲಿರುವ ಪದ್ಯಗಳಿಗೆ ಬೇರೆ ಬೇರೆಯಾಗಿ ಫಲವನ್ನು ಕೊಡಬೇಕೆಂದಿಚ್ಛಿಸಿ ಸರ್ವರಿಗೂ ಸರ್ವಾರಿಷ್ಟನಿವೃತ್ತಿಪೂರ್ವಕ ಶುಭಪ್ರಾಪ್ತಿಯಾಗುವುದಕ್ಕಾಗಿ ಹಿರಣ್ಯಕಶಿಪುವನ್ನು ಸಂಹರಿಸಿ ಆತನ ಕರಳನ್ನು ಮಾಲಿಕೆಯಾಗಿ ಧರಿಸಿಕೊಂಡ ಶ್ರೀನರಸಿಂಹದೇವರ ಸ್ತುತಿರೂಪವಾದ ನಖಸ್ತುತಿಯನ್ನು ನಿರ್ಮಿಸಿದರು. (2) ಸಂಸಾರಕ್ಕೆ ಕಾರಣಗಳಾದ ದುರ್ಜ್ಞಾನ ದುಷ್ಕರ್ಮಗಳಿಗೆ, ಅಭಿಮಾನಿಗಳಾದ ಎಲ್ಲಾ ದೈತ್ಯರನ್ನು ಶ್ರೀನರಸಿಂಹದೇವರ ಉಗುರುಗಳು ಸಂಹರಿಸಿ ತನ್ಮೂಲಕವಾದ ಎಲ್ಲಾ ಅನಿಷ್ಟವನ್ನು ಪರಿಹರಿಸುತ್ತವೆ. ಆದುದರಿಂದಲೇ ಈ ನಖಸ್ತುತಿಯು ಬ್ರಹ್ಮ ರುದ್ರ ಮೊದಲಾದ ಉತ್ತಮಾಧಿಕಾರಿಗಳಿಂದಲೂ ಉಪಾಸ್ಯವಾಗಿದೆ. ಎಂದು ಪ್ರತಿಪಾದಿಸುತ್ತಾ ಎಲ್ಲಾ ಸಜ್ಜನರನ್ನೂ ರಕ್ಷಿಸಲೆಂದು ಆಚಾರ್ಯರು ಪ್ರಾರ್ಥಿಸಿದರು. (3) ಬ್ರಹ್ಮಾದಿಯೋಗಿಗಳ ಭಗವದ್ವಿಷಯಕಗಳಾದ ಅಂತಃಕರಣ ವೃತ್ತಿರೂಪವಾದ ಜ್ಞಾನಪ್ರವಾಹಕ್ಕೆ ಇದೇ ಮೊದಲೆಂದಿಲ್ಲದಿರುವುದರಿಂದ ಅನಾದಿಯಾದ ಪ್ರಯುಕ್ತ ಭಗವದ್ವಿಷಯಕ ವಾದ ಅಜ್ಞಾನವು ದೂರದಿಂದಲೇ ಬ್ರಹ್ಮಾದಿ ದೇವತೆಗಳೂ ಧ್ಯಾನಿಸುತ್ತಾರೆ. ಪ್ರಬಲವಾದ ಶತ್ರುಗಳನ್ನು ಸಂಹರಿಸತಕ್ಕವುಗಳು ಎಂದು ಹೇಳಿರುವುದರಿಂದ ಶ್ರೀನರಸಿಂಹನ ನಖರಗಳು ದೇವೇಂದ್ರನ ವಜ್ರಾಯುಧದಿಂದಲೂ ಶ್ರೇಷ್ಠಗಳೆಂದು ವ್ಯಕ್ತವಾಯಿತು. ॥ 1 ॥

'ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋರ್ಮಹಾತಾತ್ಪರ್ಯಂ ನೈವ ಚಾನ್ಯತ್ರ ಸತ್ಯಂ' ಎಂದು ಶ್ರುತಿಯಿರುವುದರಿಂದ ಶ್ರೀನರಸಿಂಹದೇವರಿಗೆ ಸಮಾನಿಕರೂ ಉತ್ತಮರೂ ಯಾರೂ ಇಲ್ಲ, ಆತನೇ ಸರ್ವೋತ್ತಮನು, ಇದೇ ಎಲ್ಲಾ ಸಚ್ಛಾಸ್ತ್ರಗಳ ಮುಖ್ಯತಾತ್ಪರ್ಯವು ಎಂಬುದನ್ನು ತಿಳಿಸುತ್ತಾರೆ.

ಮೂಲ ॥ ಲಕ್ಷ್ಮೀಕಾಂತ ಸಮಂತತೋಽಪಿ ಕಲಯನ್ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮವಸ್ತು ದೂರತರತೋಽ-
ಪಾಸ್ತಂ ರಸೋ ಯೋಽಷ್ಟಮಃ ।
ಯದ್ರೋಷೋತ್ಕರದಕ್ಷನೇತ್ರಕುಟಿಲಪ್ರಾಂತೋತ್ಥಿತಾಗ್ನಿ
ಸ್ಫುರತ್ಖದ್ಯೋತೋಪಮ ವಿಸ್ಫುಲಿಂಗ
ಭಸಿತಾ ಬ್ರಹ್ಮೇಶಶಕ್ರೋತ್ಕರಾಃ ॥ ೨ ॥


ಅರ್ಥ ॥ ಹೇ ಲಕ್ಷ್ಮೀಕಾಂತ=ಲಕ್ಷ್ಮೀಪ್ರಿಯನಾದ ಶ್ರೀನರಸಿಂಹನೇ, ಈಶಿತುಃ=ಸರ್ವಸ್ವಾಮಿ ಯಾದ, ತೇ=ನಿನಗೆ, ಸಮಂ=ಸದೃಶವಾದ ವಸ್ತುವನ್ನು, ಸಮಂತತೋಽಪಿ=ಸರ್ವ ಜಗತ್ತಿನಲ್ಲಿಯೂ, ಕಲಯನ್=(ಮನಸ್ಸಿನಿಂದ ಪ್ರಮಾಣಗಳಿಂದಾಗಲೀ) ವಿಚಾರಿಸತಕ್ಕ ನಾನು, ನ ಪಶ್ಯಾಮ್ಯೇವ= ನೋಡುವುದೇ ಇಲ್ಲ, ಯಃ=ಅತ್ಯಂತವಾಗಿ ಅಸತ್ತೆಂದು ಪ್ರಸಿದ್ಧವಾದ, ಅಷ್ಟಮಃ=ಎಂಟನೇದ್ದಾದ, ರಸಃ=ರಸದಂತೆ, ಉತ್ತಮವಸ್ತು=ಶ್ರೀನರಸಿಂಹದೇವರಿಂದ ಶ್ರೇಷ್ಠವಾದ ಪದಾರ್ಥವು, ದೂರತರತಃ= ಅತಿದೂರದಿಂದಲೇ, ಅಪಾಸ್ತಂ=ನಿರಸ್ತವಾಯಿತು. ಬ್ರಹ್ಮೇಶಶಕ್ರೋತ್ಕರಾಃ, ಬ್ರಹ್ಮಾ=ಚತುರ್ಮುಖ ಬ್ರಹ್ಮರು, ಈಶ=ರುದ್ರರು, ಶಕ್ರ=ದೇವೇಂದ್ರರೂ ಇವರ, ಉತ್ಕರಾಃ=ಸಮುದಾಯಗಳು, ಭಸಿತಾಃ, ಯದ್ರೋಷೋತ್ಕರದಕ್ಷನೇತ್ರಕುಟಿಲ ಪ್ರಾಂತೋತ್ಥಿತಾಗ್ನಿಸ್ಫುರತ್ಖದ್ಯೋತೋಪಮವಿಸ್ಫುಲಿಂಗ

ಯತ್=ಯಾವ ನರಸಿಂಹದೇವರ, ರೋಷ=ಕ್ರೋಧಗಳ, ಉತ್ಕರ=ಸಮೂಹವುಳ್ಳ, ದಕ್ಷ=ದಕ್ಷಿಣವಾದ, ನೇತ್ರ=ಕಣ್ಣಿನ, ಕುಟಿಲ=ವಕ್ರವಾದ, ಪ್ರಾಂತ=ಅಪಾಂಗ ಪ್ರದೇಶದಿಂದ, ಉತ್ಥಿತಃ=(ಸಂಹಾರ ಕಾಲದಲ್ಲಿ) ಹುಟ್ಟಿದ, ಅಗ್ನಿ=ಬೆಂಕಿಯ, ಸ್ಫುರತ್=ಜ್ವಲಿಸುವ, ಖದ್ಯೋತ=ಜ್ಯೋತಿರಿಂಗಣಗಳಿಗೆ, ಉಪಮಾ=ಸಾದೃಶ್ಯವುಳ್ಳ, ವಿಸ್ಫುಲಿಂಗ=ಬೆಂಕಿಯ ಕಿಡಿಗಳಿಂದ, ಭಸಿತಾಃ=ಭಸ್ಮೀಕೃತರಾಗುತ್ತಾರೋ?

ತಾತ್ಪರ್ಯ ॥ (1) 'ನೈವ ಪಶ್ಯಾಮಿ' ಎನ್ನುವುದರಿಂದ ನರಸಿಂಹನಿಗೆ ಸದೃಶವಾದ ವಸ್ತುವಿಲ್ಲವೆನ್ನುವುದರಲ್ಲಿ ಯೋಗಿಶ್ರೇಷ್ಠರ ಪ್ರತ್ಯಕ್ಷವು ಪ್ರಮಾಣವೆಂದು ತೋರಿಸಲ್ಪಟ್ಟಿತು. (2) ಲೋಕವೇದಗಳಲ್ಲಿ ಮಧುರ, ಲವಣ, ತಿಕ್ತ, ಆಮ್ಲ, ಕಟು, ಕಷಾಯಗಳೆಂದು ಆರೇ ರಸಗಳು ಪ್ರಸಿದ್ಧಗಳು. ಏಳನೇ ರಸವೇ ಇಲ್ಲ, ಆರು ರಸಗಳಿಂದತಿರಿಕ್ತವಾದ ರಸವು ಮೊದಲ ಕೋಡಿನಂತೆ. ಎಂಟನೇ ರಸವಾದರೂ ಸುತರಾಂ ಹೇಗೆ ಅಪ್ರಸಿದ್ಧವೋ, ಹಾಗೆಯೇ ಶ್ರೀನರಸಿಂಹದೇವರಿಗೆ ಸದೃಶವಾದ ದೇವತೆಯೇ ಇಲ್ಲ, ಉತ್ತಮ ದೇವತೆಯು ಸುತರಾಂ ಅಪ್ರಸಿದ್ಧವು. (3) ಅತೀತಾದ್ಯನಂತ ಬ್ರಹ್ಮಾದಿ ಸಮಸ್ತ ದೇವತೆಗಳು, ಅಸುರರು ಮೊದಲಾದ ಜಗತ್ಸಮೂಹಗಳು ಶ್ರೀನರಸಿಂಹನಿಂದುತ್ತಮ ವಸ್ತುವಿಲ್ಲವೆನ್ನುವುದರಲ್ಲಿ ಶ್ರುತ್ಯನುಸಾರಿಯಾದ ಯುಕ್ತಿಯು ಪ್ರಮಾಣವೆಂದು ತೋರಿಸಲ್ಪಟ್ಟಿತು. ತಥಾಚ ಶ್ರೀನರಸಿಂಹದೇವರ ಕಡೆಗಣ್ಣಿನ ನೋಟದಿಂದಲೇ ಬ್ರಹ್ಮಾದಿ ದೇವತೆಗಳಿಗೆ ಉತ್ಪತ್ತಿ, ಸ್ಥಿತಿ, ಸಂಹಾರಾದಿಗಳಾಗುವುದರಿಂದ ಆತನ ಅಧೀನರೇ. ಆದುದರಿಂದ ಸಮಾನಿಕರೂ ಅಲ್ಲ, ಸುತರಾಂ ಉತ್ತಮಗಳಾಗಲಾರರು, ಆದುದರಿಂದ ಶ್ರೀಹರಿಯೇ ನರಸಿಂಹನೇ ಸರ್ವೋತ್ತಮನಾದುದರಿಂದ ಸರ್ವದಾ ಶ್ರೇಯಸ್ಸನ್ನು ಪಡೆಯಬೇಕೆಂದಿಚ್ಛಿಸುವವರು ಆತನನ್ನೇ ಧ್ಯಾನಿಸಬೇಕು ॥ 2 ॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಾ ಶ್ರೀನಖಸ್ತುತಿಸ್ಸಮಾಪ್ತಾ ।

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ನಿರ್ಮಿಸಲ್ಪಟ್ಟ ಶ್ರೀನಖಸ್ತುತಿಯು ಸಮಾಪ್ತವಾಯಿತು. ॥ ಶ್ರೀಃ ॥



ಶ್ರೀಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ
ಶ್ರೀಶ್ರೀಪಾದರಾಜ ಮಠ, ಮುಳಬಾಗಿಲು